ದಿನಾಂಕ:23-02-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ **1, 2, 4** ರಿಂದ **6** ರವರ ಪರ ಶ್ರೀ ಎಸ್ ಎಂ ಬಿ ವಕೀಲರಿಂದಃ</u>

ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ಗೊತ್ತೇ ಎಂದರೆ ಗೊತ್ತಿರುತ್ತದೆ. ಅದರಲ್ಲಿ ಏನು ಬರೆದಿರುತ್ತದೆ ಎಂದರೆ ನಮ್ಮ ಹೊಲಗಳು ಜಂಟಿಯಾಗಿರುತ್ತವೆ, ನನ್ನ ಹಿಸ್ಸೆಯ ಜಮೀನು ಕೊಡಿಸಬೇಕೆಂದು ಬರೆದಿರುತ್ತೇನೆ. 1 ರಿಂದ 11 ನೇ ವಾದಿಗಳು ನಿಮಗೆ ಅಧಿಕಾರ ಪತ್ರವನ್ನು ನೀಡಿದ್ದಾರೆಯೇ ಎಂದರೆ ನೀಡಿರುತ್ತಾರೆ. ನಾನು ಅಧಿಕಾರ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಕೀಲರಿಗೆ ನೀಡಿರುತ್ತೇನೆ. ವಕೀಲರಿಗೆ ಸದರಿ ಪತ್ರವನ್ನು ನೀಡಿದ್ದೇನೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ರಿಂದ 11 ನೇ ವಾದಿಗಳು ನ್ಯಾಯಾಲಯಕ್ಕೆ ಹಾಜರಾದರೆ ಸತ್ಯಾಂಶ ಹೊರ ಬರುತ್ತದೆ ಎಂದು ಅವರು ನನಗೆ ಅಧಿಕಾರ ಪತ್ರವನ್ನು ಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

2. ದಾವಾ ಆಸ್ತಿ ಸರ್ವೆ ನಂ.374 ಆಗಿದ್ದು, ಒಟ್ಟು ವಿಸ್ತೀರ್ಣ 5 ಎಕರೆ 17 ಗುಂಟೆ ಇರುತ್ತದೆ. ದಾವಾ ಆಸ್ತಿಯ ಚಕಬಂದಿ ಪೂರ್ವಕ್ಕೆ ಹೊಳೆ, ಪಶ್ಚಿಮಕ್ಕೆ ರಸ್ತೆ, ದಕ್ಷಿಣಕ್ಕೆ ಶಿವಲಿಂಗಪ್ಪ ಸತ್ತೆಪ್ಪ ಮಾನೋಜಿ ರವರ ಜಮೀನು, ಉತ್ತರಕ್ಕೆ ರಾಮಪ್ಪ ರವರ ಜಮೀನು ಇರುತ್ತದೆ. ಚಕಬಂದಿಯ ಬಗ್ಗೆ ದಾವೆಯನ್ನು ಸಲ್ಲಿಸುವ ಕಾಲಕ್ಕೆ ವಕೀಲರಿಗೆ ಮಾಹಿತಿಯನ್ನು ನೀಡಿದ್ದಿರಾ ಎಂದರೆ ನೀಡಿರುತ್ತೇನೆ. ನಾನು ನ್ಯಾಯಾಲಯಕ್ಕೆ ದಾವೆಯನ್ನು ಸಲ್ಲಿಸುವಾಗ ದಾವಾ ಆಸ್ತಿಗೆ ಚಕಬಂದಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಇದೆ ನ್ಯಾಯಾಲಯದಲ್ಲಿ ಓ ಎಸ್ ನಂ.497/2022 ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ.

ಸದರಿ ದಾವೆಯನ್ನು ನನ್ನ ಚಿಕ್ಕಪ್ಪನ ಮಕ್ಕಳು ದಾಖಲಿಸಿರುತ್ತಾರೆ. ಸದರಿ ದಾವೆಯ ಮುಂದಿನ ಮುದ್ದತ್ತು ದಿಃ28/2/2024 ರಂದು ಇರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿನ ಪಕ್ಷಗಾರರೇ ಮತ್ತು ಪ್ರಸ್ತುತ ದಾವೆಯ ಪಕ್ಷಗಾರರಾಗಿರುತ್ತಾರೆ ಎಂದರೆ ಸರಿ.

3. ಕಾಡಪ್ಪ ಯಾವಾಗ ಮೃತರಾಗಿರುತ್ತಾರೆ ಎಂದರೆ 20-30 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ನಿಖರವಾದ ದಿನಾಂಕ ಗೊತ್ತಿಲ್ಲ. ಸದರಿಯವರ ಹೆಂಡತಿಯ ಹೆಸರು ನೀಲ್ಲವ್ವ. ಸದರಿಯವರ ಹೆಸರನ್ನು ವಂಶವೃಕ್ಷದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಕಾಡಪ್ಪ ರವರಿಗೆ 4 ಜನ ಮಕ್ಕಳು. ಅವರೆಂದರೆ ದುಂಡಪ್ಪ, ಗುರಪ್ಪ, ಕಾಡಪ್ಪ, ಯಮನಪ್ಪ. ಕಾಡಪ್ಪ ರವರ ಮಗ ಕಾಡಪ್ಪ ರವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಅವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ. ನನ್ನ ತಾತ ಕಾಡಪ್ಪ ರವರಿಗೆ ಯಮನವ್ವ ಎಂಬ ಮಗಳು ಇದ್ದಾರೆ ಎಂದರೆ ಸರಿ. ಸದರಿಯವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿಯವರು ಮೃತರಾಗಿದ್ದು, ಅವರಿಗೆ 5 ಜನ ಮಕ್ಕಳು ಇದ್ದಾರೆ ಎಂದರೆ ಸರಿ. ಅವರೆಂದರೆ ಸತ್ತೆಪ್ಪ, ಕೆಂಪಣ್ಣ, ಬಾಳಪ್ಪ, ನೀಲವ್ವ ಮತ್ತು ಕಸ್ತೂರಿ ಎಂದರೆ ಸರಿ. ಸದರಿಯವರು ಮುತ್ನಾಳದಲ್ಲಿ ಜೀವಂತ ಇದ್ದಾರೆ ಎಂದರೆ ಸರಿಯಲ್ಲ. ನೀಲವ್ವ ರವರು ಜೀವಂತ ಇದ್ದಾರೆ. ಯಮನವ್ವ ರವರ ಮಕ್ಕಳು ಜೀವಂತ ಇದ್ದರೂ ಸಹ ಮೃತರಾಗಿದ್ದಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

4. ಮೃತ ಕಾಡಪ್ಪ ರವರಿಗೆ ನಿಂಗವ್ವ ಮಲ್ಲಪ್ಪ ಬಸ್ತವಾಡ ಎಂಬ ಮಗಳು ಇದ್ದಾರೆ ಎಂದರೆ ಸರಿ. ಅವರು ಮೃತರಾಗಿರುತ್ತಾರೆ. ಯಾವಾಗ ಮೃತರಾಗಿರುತ್ತಾರೆ ಎಂದರೆ ಈಗ್ಗೆ 30-40 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ಅವರಿಗೆ ಎಷ್ಟು ಜನ ಮಕ್ಕಳು

ಎಂದರೆ ಗೊತ್ತಿಲ್ಲ. ಉದ್ದೇಶಪೂರ್ವಕವಾಗಿ ಯಮನವ್ವ ಮತ್ತು ನಿಂಗವ್ವ ರವರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಅವರು ಮೃತರಾಗಿರುವುದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಮೂಲ ಪುರುಷ ಕಾಡಪ್ಪ ರವರ ಮಗ ನಿಂಗಪ್ಪ ರವರಿಗೆ 4 ಜನ ಮಕ್ಕಳಿದ್ದರೂ ಸಹ ಇಬ್ಬರನ್ನು ಮಾತ್ರ ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದರೆ ಸರಿ. ಸದರಿ ಹೆಣ್ಣುಮಕ್ಕಳ ಹೆಸರು ಮುದ್ದವ್ವ, ಕೆಂಪವ್ವ ಎಂದರೆ ಸರಿ. ಆ ಪೈಕಿ ಮುದ್ದವ್ವ ಮೃತರಾಗಿರುತ್ತಾರೆ. ಸದರಿ ಮುದ್ದವ್ವರವರ ಗಂಡನ ಹೆಸರು ರಾಮಪ್ಪ. ಅವರು ಮೃತರಾಗಿರುತ್ತಾರೆ. ಅವರಿಗೆ 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು ಇರುತ್ತಾರೆ. ಅವರೆಂದರೆ ಕಲ್ಲಪ್ಪ, ಶಿವಲಿಂಗಪ್ಪ, ಅಶೋಕ, ಅರುಣ, ಗಂಗವ್ವ, ಗೌರವ್ವ. ಸದರಿಯವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಿಮ್ಮ ಆಸ್ತಿಯನ್ನು ನೀವು ಮಾಡಿಕೊಳ್ಳಿ ಎಂದು ಹೇಳಿರುವುದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸದರಿ ವಿಚಾರವಾಗಿ ದಾಖಲೆಯನ್ನು ಬರೆದುಕೊಟ್ಟಿದ್ದಾರೆಯೇ ಎಂದರೆ ಬಾಯಿ ಮಾತಿನಲ್ಲಿ ಹೇಳಿರುತ್ತಾರೆ. ಸದರಿಯವರು ಏನನ್ನು ಹೇಳದೆ ಇದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮೂಲ ಪುರುಷ ಕಾಡಪ್ಪ ರವರ ಮಗ ದುಂಡಪ್ಪ ಜೀವಂತ ಇದ್ದಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯವನ್ನು ಕೋರಿರುತ್ತಾರೆ. ಆದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಜಿ.ದೀಪಾ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ